ದಿಃ **09-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಐಎಂಪಿ ವಕೀಲರಿಂದಃ**

ವಾದಿ ನನ್ನ ಹೆಂಡತಿಯಾಗಿರುತಾಳೆ. ನಮ್ಮ ಮದುಗೆ 1991 ರಲ್ಲಿ ಆಗಿರುತ್ತದೆ. ಬಸಪ್ಪ ಇವರಿಗೆ 2 ಜನ ಗಂಡು ಮಕ್ಕಳು. 5 ಜನ ಹೆಣ್ಣು ಮಕ್ಕಳು ಇದ್ದರು ಎಂದರೆ ನಿಜ. ಬಸಪ್ಪನ ಮಕ್ಕಳು ಮದ್ಯ ವಿಬಾಗ ಆಗಿರುವುದಿಲ್ಲ. 1ನೇ ಪ್ರತಿವಾದಿ ಬೀಮರೆಡ್ಡಿ ಮತ್ತು ಹನುಮಂತರಾಯ ಇವರ ಮದ್ಯ ವಿಬಾಗ ಆಗಿ ದೂಡ್ಡ ಮನೆ ಬೀಮರೆಡ್ಡಿಗೆ ಮತು ಸಣ್ಣ ಮನೆ ಹನುಮಂತರಾಯನಿಗೆ ಬಂದಿದೆ ಎಂದರೆ ನಿಜ. ಅವರಿಬ್ಬರೂ ಆ ರೀತಿ ವಿಬಾಗ ಮಾಡಿಕೂಂಡು ಸುಮರು 55-56 ವರ್ಪ ಆಗಿರಬಹುದು ಎಂದರೆ ನಿಜ. ನಂದಿನಿ ಕಾಂಪ್ಲೆಕ್ಸ ಇದನ್ನು 15 ವರ್ಪಗಳ ಹಿಂದೆ ಕಟ್ಟಲಾಗಿದೆ. ಅದನ್ನು ಯಾವ ವರ್ಷದಂದು ಕಟ್ಟಲಾಗಿದೆ ಎಂದು ನನಗೆ ನೆನಪಿಲ್ಲ. ಸದರಿ ಕಾಂಪ್ಲೆಕ್ಸ ಕಟ್ಟಲು ಸುಮಾರು 10 ಲಕ್ಷ ಖರ್ಚು ಅಗಿರಬಹುದು. ನಿವೇಶನ ಖರಿದಿಸಿ ನಂತರ ಕಾಂಪ್ಲೆಕ್ಸ ಕಟ್ಟಡ ಕಟ್ಟಿರುತ್ತಾರೆ. ಸದರಿ ಕಟ್ಟಡ ಕಟ್ಟಲು ಬಾಂಕಿನಿಂದ ಸಾಲ ಪಡೆಯಲಾಗಿತ್ತು ಎಂದರೆ ನಿಜ. ಸದರಿ ಸಾಲವನ್ನು 2 ಮತು 3ನೇ ಪ್ರತಿವಾದಿ ಸ್ವಂತಹ ದುಡಿದು ತೀರಿಸುತ್ತಿದಾರೆ ಎಂದರೆ ಸರಿಯಲ್ಲ. ಸದರಿ ಕಾಂಪ್ಲೆಕ್ಸ ಮೇಲೆ ಈಗ ಎಷು ಸಾಲ ಬಾಕಿ ಇದೆ ಎಂದು ನನಗೆ ಗೊತ್ತಿಲ್ಲ. ಬಾಂಕಿನಲಿ ಪಡೆದ ಸಾಲ ಅಲ್ಲದೇ ಖಾಸಗಿ ವ್ಯಕ್ತಿಗಳಿಂದಲೂ ಸಹ ಕೈಗಡ ಸಾಲ ಪಡೆದು ಕಟ್ಟಡ ಕಟ್ಟಲಾಗಿತು ಎಂದರೆ ಸರಿಯಲ್ಲ.

2. ನಂದಿ ನಿಲಯ ಕಟ್ಟಡವನ್ನು ಸುಮಾರು 7-8 ವರ್ಪಗಳ ಹಿಂದೆ ಕಟ್ಟಲಾಗಿದೆ. ಸದರಿ ಕಟ್ಟಡವನು ಬಾಂಕಿನಲ್ಲಿ ಹಾಗೂ ಬೇರೆಯವರಿಂದ ಕೈಗಡ ಸಾಲ ಪಡೆದು ಕಟ್ಟಲಾಗಿದೆ ಎಂದರೆ ಸರಿಯ.ಲ್ಲ. ಸಾಕ್ಷಿ ಕುಟುಂಬದ ಆದಾಯದಿಂದ ಕಟ್ಟಲಾಗಿದೆ ಎಂದು ನುಡಿಯುತ್ತಾರೆ. ಫ್ಲ್ಯಾಟ ನಂ. 2-2-4/ಎಜಿ-4 ಇದನು ಮಾರಾಟ ಮಾಡಿರುತಾರೆ. ಅದನು ನಂದಿ ನಿಲಯ ಕಟ್ಟಡ ಕಟ್ಟಲು ಮಾಡಿದ ಸಾಲ ತೀರಿಸಲು ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಕಟ್ಟಡವನು ಕಟ್ಟಲು 2 ಮತು 3ನೇ ಪ್ರತಿವಾದಿ ತಾವು ದುಡಿದು ಗಳಿಸಿದ ಹಣವನ್ನು ನೀಡಿರುತಾರೆ ಎಂದರೆ ಸರಿಯಲ್ಲ. ಸಾಕ್ಷಿ ತಾತ ಮುತಾತರಿಂದ ಬಂದ ಆಸ್ತಿ ಯಲಿಯ ಆದಾಯದಿಂದ ಕಟಿರುವುದಾಗಿ ನುಡಿಯುತ್ತಾರೆ.

3. 3 ನೇ ಪ್ರತಿವಾದಿ ಪಿಯುಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತಾರೆ. ಆತನ ಬಿಎ ವಿದ್ಯಾಬ್ಯಾಸ ಪೂರ್ತಿಯಾಗಿರುವುದಿಲ್ಲ. 3 ನೇ ಪ್ರತಿವಾದಿ ವಿದ್ಯಾಬ್ಯಾಸ ಮುಗಿಸಿ ಪವನ್ ಎಂಬುವವರ ಸಗಟು ಔಷದಿ ಅಂಗಡಿಯಲ್ಲಿ ದುಡಿಯುತ್ತಿದರು ಎಂದರೆ ಸರಿಯಲ್ಲ. ಆತನು ಸದರಿ ಔಷದಿ ಅಂಗಡಿಯಲಿ ದುಡಿದು ಅನುಭವ ಪಡೆದು ಸಂಬಳ ಪಡೆದು ಹಣ ಗಳಿಕೆ ಮಾಡಿರುತ್ತಾರೆ ಎಂದೆರೇ ಸರಿಯಲಃ. ಔಷದಿ ಅಂಗಡಿಯ ಅನುಭವ 3 ನೇ ಪ್ರತಿವಾದಿ ಗೆ ಹೇಗೆ ಬಂತು ಎಂದು ನನಗೆ ಹೇಳಲಾಗುವುದಿಲ್ಲ.

4. ನನ್ನ ಅತ್ತೆ ರತ್ನಮ್ಮ ಇವಳಿಗೆ ಅವರ ತವರು ಮನೆಯಿಂದ ನಿರಾವರಿ ಜಮೀನು ಬಂದಿತು ಎಂದರೆ ಸರಿಯಲ್ಲ. ನನ್ನ ಅತ್ತೆ ಸದರಿ ಜಮೀನನು ಬೇರೆಯವರಿಗೆ ಲೀಸ್ ಆದಾರದ ಮೆಲೆ ನೀಡಿ ಹಣ ಪಡೆಯುತ್ತಿದರು ಎಂದರೆ ಸರಿಯಲ್ಲ. ನನ ಅತ್ತೆ ಸದರಿ ಹಣವನ್ನು ಸಂಗ್ರಹಿಸಿ ತನ್ನ ಮಕ್ಕಳಿಗೆ ಹಣ ನೀಡುತ್ತಿದ್ದರು ಮತು ತಾವು ಬಂಗಾರ ಖರಿದಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತೆ ತಾನು ಖರಿದಿಸಿದ ಬಹಳಷ್ಟು ಬಂಗಾರವನು ವಾದಿ ನನ್ನ ಹೆಂಡತಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅತ್ತೆ ನೀಡಿದ ಹಣದಿಂದ ಹಾುಗೂ 3 ನೇಪ್ರತಿವಾದಿ ತಾನು ಗಳಿಸಿದ ಆದಾಯದಿಂದ ಹಾಗೂ ಬಾಂಕಿನಿಂದ ಸಾಲ ಪಡೆದು ನಂದಿ ಫಾರ್ಮ ಎಂಬ ಸಗಟು ಔಷದಿ ಅಂಗಡಿಯನ್ನು ಪ್ರಾರಂಬಿಸಿದ್ದರು ಎಂದರೆ ಸರಿಯಲ್ಲ. ಹೀಗಾಗಿ ನಂದಿ ಪಾರ್ಮ ಔಷದಿ ಅಂಗಡಿ 3 ನೇ ಪ್ರತಿವಾದಿಯ ಸ್ವಂತ ಗಳಿಕೆಯ ಆಸ್ತಿ ಎಂದರೆ ಸರಿಯಲ್ಲ.

5. ಟ್ರಾಕ್ಟರಗಳ ಮತು ಬತ್ತ ಕಟಾವು ಮಾಡುವ ಯಂತ್ರಗಳ ನಂಬರ ನನಗೆ ನೆನಪಿಲ್ಲ. ಅವುಗಳ ದಾಖಲೆಗಳನು ಈ ದಾವೆಯಲಿ ಹಾಜರುಪಡಿಸಿರುವುದಿಲ್ಲ. ಅಂತಹ ಟ್ರಾಕ್ಟರಗಳು ಮತು ಬತ್ತ ಕಟಾವು ಮಾಡುವ ಯಂತ್ರ ಕುಟುಂಬಕೆ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಒಂದು ಟ್ರಾಕ್ಟರ ಅನು ಸಾಲ ಮಾಡಿ ಖರೀದಿಸಿದ ಸಾಲ ತುಂಬಲು ಆಗದೇ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

6. ಹೆಚ್ ಆರ್ ಬಿ ಲೈಔಟ್ ಇರುವ ಫ್ಯಾಟ ಅನು ನನ್ನಅತೆ ರತ್ನಮ್ಮ ತನ್ನ ತವರು ಮನೆಯ ಜಮಿನಿನಿಂದ ಬಂದ ಆದಾಯದಿಂದ ಖೀರಿದಿಸಿದ ಆಸ್ತಿ ಎಂದರೆ ಸಾಕ್ಷಿ ಮೊದಲು ನಿಜ ಎಂದು ನಂತರ ಅದನು ತನ್ನಮಾವ ಅವರ ಹೆಸರಿನಲಿ ಖರಿದಿಸಿರುವುದಾಗಿ ನುಡಿಯುುತಾರೆ. ನನ್ನ ಅತ್ತೆ ಕ್ಯಾನ್ಸರ್ ನಿಂದ ಬಳಲುತಿದು ನಂತರ ಕೊವೀಡ ರೊಗ ತಗುಲಿ ತೀರಿಕೊಂಡಿರುತ್ತಾರೆ. ನನ್ನ ಅತೆಯನು ಹೆಚ ಸಿ ಜಿ ಆಸ್ಪತ್ರೆ ಬೆಂಗಳೂರಿನ ಡಾಃ

ಶೇಖರ ಪಾಟೀಲ ಇವರ ಬಳಿ ಕ್ಯಾನ್ಸರ್ ಚಿಕಿತ್ಸೆ ಕುರಿತು ಉಪಚಾರ ಪಡೆದಿದ್ದರು. ನನ್ನ ಅತ್ತೆಯ ಸದರಿ ಔಪದೊಷಚಾರಕ್ಕೆ 20 ಲಕ್ಷ ಹಣ ಖರ್ಚು ಮಾಡಿರುತಾರೆ ಎಂದರೆ ಸರಿಯಲ. ಸಾಕ್ಷಿ 10 ಲಕ್ಷ ಹಣ ಖರ್ಚು ಆಗಿರಬಹುದು ಎಂದು ನುಡಿಯುತ್ತಾರೆ. ಸದರಿ ಖರ್ಚಿಗಾಗಿ ನಿಲಾಗಲ್ ರಜಾಕ್ ಸಾಬ ಎನುವವರಿಂದ ಸಾಲ ಪಡೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಸಾಲ ತೀರಿಸುವ ಕುರಿತು ನನ್ನ ಅತ್ತೆಯ ಹೆಸರಿನಲಿದ್ದ ಪ್ಲ್ಯಾಟ್ ಅನ್ನು ರಜಾಬ್ ಸಾಬ ಇವರಿಗೆ ನನ್ನ ಅತೆಯ ಜೀವಿತಾವದಿಯಲಿ ಮಾರಾಟ ಮಾಡಲಾಗಿದೆ ಎಂದರ ಸರಿಯಲ್ಲ. ಸದರಿ ಪ್ಲ್ಯಾಟ್ ನಲಿ ಈಗ ರಜಾಕ್ ಸಾಬ ವಾಸವಿದಾರೆ ಎಂದರೆ ಸರಿಯಲ್ಲ. ಸದರಿ ಪ್ಲ್ಯಾಟ್ ಅನು ರಜಾಕ್ ಸಾಬ್ ಇವರ ಹೆಸರಿಗೆ ಖರೀದಿ ಪತ್ರ ನೊಂದಾಯಿಸುವ ಮೊದಲೀ ನನ್ನ ಅತ್ತೆ ತೀರಿಕೊಂಡಿರು ಎಂದರೆ ಸರಿಯಲ್ಲ. ಆ ಕಾರಣ ಸದರಿ ವ್ಯವಹಾರದ ಪ್ರಕಾರ ಖರಿದಿ ಪತ್ರ ನೊಂದಿಣಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ಲ್ಯಾಟ್ ಜಂಟಿ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

7. ನಾನು ಒಕ್ಕಲುತನ ಮಾಡುತೇನೆ. ನಮಗೆ ಹಂಚಿನಾಳ ಗ್ರಾಮ ವ್ಯಾಪ್ತಿಯಲ್ಲಿ ಜಮೀನು ಇದೆ. ನಮ್ಮ ಜಮೀನಿನಿಂದ ದೊಡ್ಡ ಆದಾಯ ಇರುವುದಿಲ್ಲ. ಸದರಿ ಜಮೀನಿನಿಂದ ನಮ್ಮ ಕುಟುಂಬದ ನಿರ್ವಾಹಣೆಗೆ ಬೇಕಾಗುವಷ್ಟು ಮಾತ್ರ ಆದಾಯ ಬರುತ್ತದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.